ಶ್ರೀ ಸಿ. ಎಂ. ಇಬ್ರಾಹಿಂ.—ವಿರೋಧ ಪಕ್ಷದವರು ಮನಸ್ಸಿಗೆ ಬಂದಹಾಗೆ ಮಾತನಾಡಿದರೆ, ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ ?

* * *

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಸದಸ್ಯರು ಈ ರೀತಿ ಮಾತನಾಡುತ್ತಿದ್ದಾರೆ ಇದೇನು ? ಇದನ್ನು ಮಾಡಿದ್ದು ನಾವಲ್ಲ. ಆಡಳಿತ ಪಕ್ಷದವರು.

(ಗೊಂದಲ)

ಶ್ರೀ ಸಿ. ಎಂ. ಇಬ್ರಾಹಿಂ.—ಚೀಟಿ ಬರೆದುಕೊಂಡು ಬಂದು ಇಲ್ಲಿ ಓದಿದರೆ ಅದು ಸರಿಯಾಗುತ್ತದೆಯೇ? ಅದಕ್ಕೇನು ರೂಲ್ಸ್ ಇಲ್ಲ. ಪ್ರೊಸಿಜರ್ ಇಲ್ಲವೆ? ಏನೇ ಮಾಡಬೇಕಾದರೂ ಅದಕ್ಕೆ ನಿಯಮಾವಳಿ ಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ತಾವು ಈ ರೀತಿ ಮಾಡುವುದು ಯಾವುದೂ ರೂಲ್ ಪ್ರಕಾರ ಇಲ್ಲ. ಇದು ಸಭೆಗೆ ಗೌರವ ತರತಕ್ಕದ್ದಲ್ಲ. I will look into the proceeding and expunge it.

SRI M. C. NANAIAH.—It is like that. Let him withdraw it.

(ಗೊಂದಲ)

MR. DEPUTY SPEAKER.—I appeal to all the hon. Members to maintain dignity and decorum of the House. This is not good.

(INTERRUPTION)

MR. DEPUTY SPEAKER.—Nothing will go on record.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಮನೆಯಲ್ಲಿ ಈ ರೀತಿ ನಡೆಯತಕ್ಕದ್ದು ಯಾರಿಗೂ ಗೌರವ ತರತಕ್ಕದ್ದಲ್ಲ.

ಶ್ರೀ ಜಿ. ಕೆ. ತಕ್ಕೇದ್.—ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಮಾತನಾಡುತ್ತಿದ್ದಾರೆ. ಅವರು ಯಾವ ರೂಲ್ ಪ್ರಕಾರ ಮಾತನಾಡುತ್ತಿದ್ದಾರೆ ? ಯಾವ ವಿಷಯದ ಮೇಲೆ ಮಾತನಾಡುತ್ತಿದ್ದಾರೆ? ಅಧ್ಯಕ್ಷರು ಅಪ್ಪಣೆ ಕೊಟ್ಟಲ್ಲ. ಅವರು ಏತಕ್ಕೆ ಮಾತನಾಡುತ್ತಿದ್ದಾರೆ ?

SRI C. M. ARUMUGHAM.—Sir, may I request you to adjourn the House for ten minutes ?

ಉಪಾಧ್ಯಕ್ಷರು.—ಏತಕ್ಕೋಸ್ಕರ ಅಡ್ಜರ್ನ್ಡ್ ಮಾಡಬೇಕು ? Why should we adjourn unnecessarily ? Where is the point in adjourning the House? It is already 2.45 P.M. We are proceeding further. I had called the Secretary. Mean while the hon. Member rose.

SRI A. LAKSHMISAGAR.—Sir, the hon. Members from the Opposition wrote a letter to the Chief Minister on 12th October 1982 making five demands on the Government. And the Government so far has not actedfavourably. So we protest as the attitude of the Government and we are offering a Dharna in this House.

ಶ್ರೀ ಎಚ್. ಗಂಗಾಧರನ್.- ಸರ್ಕಾರದ ಧೋರಣೆಗಳನ್ನು ಪ್ರತಿಭಟಿಸಿ ಧರಣಿ ಕೂರದೆ ನಮ್ಮ ಪಕ್ಷದ ಸದಸ್ಯರುಗಳು ವಾಕ್‌ಔಟ್ ಮಾಡುತ್ತೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭೆಯಿಂದ ಹೊರಗಡೆ ಹೋದರು)

(ವಿರೋಧ ಪಕ್ಷದ ಸದಸ್ಯರುಗಳು ಅಧ್ಯಕ್ಷ ಪೀಠದ ಮುಂದಿರುವ ಜಾಗದಲ್ಲಿ ಕುಳಿತುಕೊಂಡರು)

* Word expunged as ordered by the chair.